(ಇಂದು ದಿನಾಂಕ 10-03-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಮುಖ್ಯ ವಿಚಾರಣೆ – ವಾದಿ ಪರ ಶ್ರೀ ಎಂ.ಡಿ.ಆರ್. ವಕೀಲರಿಂದ–**

ನಾನು ಈ ಪ್ರಕರಣದಲ್ಲಿ ವಾದಿ ಇದ್ದು, ನನ್ನ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದೆ. ಅದನ್ನು ನಾನೇ ಹೇಳಿ ಬರೆಸಿದ್ದೇನೆ.

ನಾನು ದಾವೆಗೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ದಾವಾ 'ಅ' ಅನುಸೂಚಿಯ 1 ನೇ ಐಟಂ ಸ್ವತ್ತಿಗೆ ಸಂಬಂಧಪಟ್ಟಂತೆ 5 ಪಹಣಿಪತ್ರಿಕೆಗಳನ್ನು ಕ್ರಮವಾಗಿ ನಿ.ಪಿ.1 ರಿಂದ ನಿ.ಪಿ. 5 ಎಂದು, ದಾವಾ 'ಅ' ಅನುಸೂಚಿಯ 2 ನೇ ಐಟಂ ಸ್ವತ್ತಿಗೆ ಸಂಬಂಧಪಟ್ಟಂತೆ 5 ಪಹಣಿಪತ್ರಿಕೆಗಳನ್ನು ಕ್ರಮವಾಗಿ ನಿ.ಪಿ.6 ರಿಂದ ನಿ.ಪಿ. 10 ಎಂದು, ಹಕ್ಕುಗಳ ಪತ್ರಿಕೆಯ 4 ದೃಢೀಕೃತ ಪ್ರತಿಯನ್ನು ಕ್ರಮವಾಗಿ ನಿ.ಪಿ.11 ರಿಂದ ನಿ.ಪಿ. 14 ಎಂದು, ಹಕ್ಕು ಬದಲಾವಣೆ ವಹಿಯ 2 ದೃಢೀಕೃತ ಪ್ರತಿಯನ್ನು ನಿ.ಪಿ.15 ಮತ್ತು 16 ಎಂದು, ಎಂ.ಆರ್.ನ ದೃಢೀಕೃತ ಪ್ರತಿಯನ್ನು ನಿ.ಪಿ.17 ಎಂದು, ನಮೂನೆ-7 ರ ದೃಢೀಕೃತ ಪ್ರತಿಯನ್ನು ನಿ.ಪಿ.18 ಎಂದು, ನಮೂನೆ-10 ರ ದೃಢೀಕೃತ ಪ್ರತಿಯನ್ನು ನಿ.ಪಿ.19 ಎಂದು, ಭೂನ್ಯಾಯಮಂಡಳಿಯ ಆದೇಶದ ದೃಢೀಕೃತ ಪ್ರತಿಯನ್ನು ನಿ.ಪಿ.20 ಎಂದು, ಹಕ್ಕುಗಳ ಪತ್ರಿಕೆಯ 4 ದೃಢೀಕೃತ ಪ್ರತಿಯನ್ನು ಕ್ರಮವಾಗಿ ನಿ.ಪಿ.21 ರಿಂದ ನಿ.ಪಿ.24 ಎಂದು, ಎಂ.ಆರ್.ನ ದೃಢೀಕೃತ ಪ್ರತಿಯನ್ನು ನಿ.ಪಿ.25 ಎಂದು, ದಾವಾ 'ಅ' ಅನುಸೂಚಿಯ 3 ನೇ ಐಟಂ ಸ್ವತ್ತಿಗೆ ಸಂಬಂಧಪಟ್ಟಂತೆ ಪಹಣಿಪತ್ರಿಕೆಯನ್ನು ನಿ.ಪಿ.26 ಎಂದು ಗುರುತಿಸಲಾಯಿತು.

ಸಾಕ್ಷಿ ವಿಚಾರಣೆ ಹಾಗೂ ದಾಖಲಾತಿಗಳ ಆಧಾರದ ಮೇಲೆ ದಾವೆಯಲ್ಲಿ ಕೇಳಿರುವಂತೆ ಆದೇಶ ಮಾಡಬೇಕಾಗಿ ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ